ಹಕ್ಕುಪತ್ರ ಕೊಡುವುದಿಲ್ಲ. ನಾವು ಸ್ಲಮ್ ಎಂದು ಗುರುತಿಸಿದ ಮೇಲೆ ಆ ಸ್ಲಮ್‌ನಲ್ಲಿರತಕ್ಕಂಥವರಿಗೆ ಮೊದಲು ಗುರುತಿನ ಚೀಟಿಯನ್ನು ಕೊಡುತ್ತೇವೆ. ಗುರುತಿನ ಚೀಟಿಯನ್ನು ಕೊಟ್ಟಾದ ಮೇಲೆ ಅವರು ಮನೆಕಟ್ಟಿದ ಮೇಲೆ ಮನೆ ಹಕ್ಕುಪತ್ರವನ್ನು ಅವರಿಗೆ ಕೊಡುತ್ತಿದ್ದೇವೆ. ಆದುದರಿಂದ ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಈಗಾಗಲೇ 21 ಸ್ಲಮ್‌ಗಳವರನ್ನು ಗುರುತಿಸಿದ್ದೇವೆ. ಮತ್ತು ಅವರಿಗೆ ಈಗಾಗಲೇ ಗುರುತಿನ ಚೀಟಿಯನ್ನು ಕೊಟ್ಟಿದ್ದೇವೆ. ಈಗ ಇನ್ನೂ 25 ಸ್ಲಮ್‌ಗಳವರನ್ನು ಗುರುತಿಸಬೇಕಾಗಿದೆ, ಅದು ಸ್ವಲ್ಪ ತಡವಾಗಿದೆ, ಅದನ್ನು ಮಾಡಿಸುವುದಕ್ಕೆ ನಮ್ಮ ಅಧಿಕಾರಿಗಳಿಗೆ ನಾನು ಆದೇಶ ಕೊಡುತ್ತೇನೆ, ಈಗ 56 ಮನೆಗಳು ಪೂರ್ಣಗೊಂಡಿವೆ, ಅವುಗಳಿಗೆ ವಿದ್ಯುತ್ ಸರಬರಾಜನ್ನು ಮಾತ್ರ ಕೊಡಬೇಕಾಗಿದೆ, ಅದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ವಿದ್ಯುತ್ ಸರಬರಾಜು ಕೊಟ್ಟಾದ ಮೇಲೆ ಉಳಿದಂಥ 45ಕ್ಕೆ ಏನಾಗಿದೆಯೆಂದರೆ, ಅಲ್ಲಿ ಆ ಮನೆಗಳಿಲ್ಲಾ ಹೋದಮೇಲೆ ಖಾಲಿ ಜಾಗಕ್ಕೆ ಅವರನ್ನು ಕಳುಹಿಸಿ ಅವರು ಅಲ್ಲಿ ಮೊದಲು ಇದ್ದಂಥ ಜಾಗದಲ್ಲಿ ಆದಷ್ಟು ಬೇಗ ಮನೆಗಳನ್ನು ಕಟ್ಟುವ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಆದಷ್ಟು ಜಾಗ್ರತೆ ಇದರ ಬಗ್ಗೆ ವ್ಯವಸ್ಥೆ ಮಾಡುತ್ತೇನೆಂದು ಸನ್ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ರಾಮಲಿಂಗರೆಡ್ಡಿ : ಅವುಗಳು ಈಗಾಗಲೇ ನೋಟಿಫೈಡ್ ಸ್ಲಮ್ಸ್.

ಅಧ್ಯಕ್ಷರು : ನೀವು ಹೇಳಿದ್ದುದು ನನಗೆ ಅರ್ಥವಾಗಿದೆ, ಫೈನಾನ್ಸಿಷಿಯಲ್ ಇಂಪ್ಲಿಕೇಶನ್ಸ್ ಏನೂ ಇಲ್ಲ, ಜಾಗ ಕೂಡ ಇದೆ, ಜನರೂ ಇದ್ದಾರೆ, ಆದಕಾರಣ ಹಕ್ಕುಪತ್ರ ಕೊಟ್ಟುಬಿಡಲಿ ಎಂದಿದ್ದೀರಿ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಸದಸ್ಯರು ಹೇಳಿರುವುದನ್ನು ಮಾಡುವುದಕ್ಕೆ ಹಣದ ಲಭ್ಯತೆ ನೋಡಿಕೊಂಡು ಮಾಡಬೇಕಾಗುತ್ತದೆ.

ಅಧ್ಯಕ್ಷರು : ಅವರು ಏನು ಹೇಳಿದ್ದಾರೆಂದರೆ, ಇದಕ್ಕೆ ಹಣದ ಅವಶ್ಯಕತೆಯಿಲ್ಲ. ಅವರು ಈಗಾಗಲೇ ಅಲ್ಲಿದ್ದಾರೆ, ಸ್ಲಮ್ ನೋಟಿಫೈಡ್ ಆಗಿದೆ, ಅವರಿಗೆ ಹಕ್ಕುಪತ್ರ ಕೊಡಿ ಎಂದಿದ್ದಾರೆ. ಆದುದರಿಂದ ನೀವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ.

ಶ್ರೀ ತಿಪ್ಪೇಸ್ವಾಮಿ : ಆಯಿತು.

ಸುರತ್ಕಲ್ ಕ್ಷೇತ್ರದಲ್ಲಿ ಪ್ರವಾಹದಿಂದ ತೊಂದರೆಗೊಳಗಾದ ಗ್ರಾಮಗಳು

576 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ನೇ ಸಾಲಿನಲ್ಲಿ ಸುರತ್ಕಲ್ ಕ್ಷೇತ್ರದಲ್ಲಿ ನೆರೆ ಹಾವಳಿಗೊಳಗಾದ ಗ್ರಾಮಗಳೆಷ್ಟು? (ವಿವರ ನೀಡುವುದು)*

ಆ) *ಸದರಿ ಗ್ರಾಮಗಳಲ್ಲಿ ಮನೆ ಕುಸಿತ ಬೆಳೆ ಹಾನಿ ಹಾಗೂ ಪ್ರಾಣ ಹಾನಿ ಎಷ್ಟು?*

ಇ) ನಷ್ಟ ಹೊಂದಿದವರಿಗೆ ನೀಡಿದ ಪರಿಹಾರ ಧನ ಎಷ್ಟು? (ಬೆಳೆಹಾನಿ, ಪ್ರಾಣಹಾನಿ ಇವುಗಳಿಗೆ ಸಂಬಂಧಿಸಿದ ವಿವರ ಒದಗಿಸುವುದು)?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಕೆಳಕಂಡ 19 ಗ್ರಾಮಗಳು ಪ್ರಸ್ತುತ ವರ್ಷದಲ್ಲಿ ಸುರತ್ಕಲ್ ಕ್ಷೇತ್ರದಲ್ಲಿ ನೆರೆ ಹಾವಳಿಗೊಳಗಾಗಿರುತ್ತವೆ.

1) ಸುರತ್ಕಲ್ 2) ಹೇಳ್ಯಾಯರು 3) ಮಧ್ಯ 4) ನೂರಿಂಬಿ 5) ದೇಲಂತಬೆಟ್ಟು 6) ತೆಂಕಎಕ್ಕಾರು 7) ಬಡಗ ಎಕ್ಕಾರು 8) ಕುತ್ತೆತ್ತೂರು 9) ಬಜಫೆ 10) ಮಳವೂರು 11) ಕೆಂಜಾರು 12) ತೋಕೂರು 13) ಪಂಬಿ ಮೊಗರು 14) ಕುಂಜತಬೈಲು 15) ಪಡುಶೆಡ್ಡೆ 16) ಮೂಡುಶೆಡ್ಡೆ 17) ತಣ್ಣೀರುಬಾವಿ 18) ಬಂಗ್ರಕೂಳೂರು ಮತ್ತು 19) ಕಣ್ಣೂರು.

ಆ) ಮನೆ ಕುಸಿತ - 1297

ಬೆಳೆ ಹಾನಿ - 463.45 ಎಕರೆಗಳು

ಪ್ರಾಣ ಹಾನಿ - 5.

ಇ) ನಷ್ಟ ಹೊಂದಿದವರಿಗೆ ರೂ 6,57,965-00 ಗಳ ಪರಿಹಾರವನ್ನು ಪಾವತಿಸಲಾಗಿದೆ, ವಿವರ ಹೀಗೆದೆ.

ಮನೆ ಕುಸಿತಕ್ಕೆ	ರೂ. 6,07,725-00
ಬೆಳೆ ಹಾನಿಗೆ	ರೂ. 50,240-00
ಒಟ್ಟು	**ರೂ. 6,57,965-00**

5 ಮೃತ ಪ್ರಕರಣಗಳ ಪೈಕಿ, ಒಂದರಲ್ಲಿ ಅನುಕಂಪ ಭತ್ಯೆ ಮಂಜೂರು ಆಗುವ ಹಂತದಲ್ಲಿದೆ, ಉಳಿದ ಪ್ರಕರಣಗಳಲ್ಲಿ ಮೃತರ ವಾರಸುದಾರರು ಅಗತ್ಯ ದಾಖಲೆಗಳನ್ನು ಒದಗಿಸಿಲ್ಲವಾದ್ದರಿಂದ ಇನ್ನೂ ಪರಿಹಾರಧನ ಪಾವತಿ ಆಗಬೇಕಾಗಿದೆ.

ಶ್ರೀ ಕುಂಬ್ಳೆ ಸುಂದರ್‌ರಾವ್ : ಮಾನ್ಯ ಅಧ್ಯಕ್ಷರೇ, 1997-98ನೇ ಸಾಲಿನಲ್ಲಿ ಸುರತ್ಕಲ್ ಕ್ಷೇತ್ರದಲ್ಲಿ ನೆರೆ ಹಾವಳಿಗೆ ಒಳಗಾದ ಗ್ರಾಮಗಳ ಬಗ್ಗೆ ವಿವರಗಳನ್ನು ಕೇಳಿರುವುದಕ್ಕೆ 19 ಗ್ರಾಮಗಳಲ್ಲಿ ವಿಶಾಲವಾದ ಪ್ರದೇಶಗಳಲ್ಲಿ ನೆರೆ ಹಾವಳಿಗೆ ಒಳಗಾಗಿದೆ ಎಂದಿದ್ದಾರೆ. ನೆರೆ ಹಾವಳಿಗೊಳಗಾದ ಒಟ್ಟು ಪ್ರದೇಶದ ವಿಸ್ತೀರ್ಣದಲ್ಲಿ 463.65 ಎಕರೆಗಳು ಎಂದಿದ್ದಾರೆ. ಪ್ರಾಣ ಹಾನಿ 5 ಎಂದು ಹೇಳಿದ್ದಾರೆ. ನನಗೆ ಇಲ್ಲಿ ಏನು ಸಮಸ್ಯೆ ಕಂಡುಬರುತ್ತಿದೆಯೆಂದರೆ ನೊಂದವರಿಗೆ ಕೊಟ್ಟ ಪರಿಹಾರದ ಸಂಖ್ಯೆ ಓದಿ ಆಶ್ಚರ್ಯವಾಗುತ್ತಿದೆ. ಕೇವಲ ಬೆಳೆಹಾನಿಗೆ "50 ಸಾವಿರ ರೂ.ಗಳನ್ನು ಮಾತ್ರ ಪರಿಹಾರ ಕೊಟ್ಟಿದ್ದಾರೆ. 19 ಜಿಲ್ಲೆಗಳಲ್ಲಿ ನೆರೆ ಹಾವಳಿಯಾಗಿದೆ", ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಕಾಲದಲ್ಲಿ 3 ಬೆಳೆ

ತೆಗೆಯುತ್ತಿದ್ದುದ್ದು ಇಂದು ಒಂದು ಬೆಳೆ ಮಾಡುವ ಸ್ಥಿತಿ ಜನಕ್ಕೆ ಬಂದಿದೆ. ಈ ಬಾರಿ ಮಳೆಗಾಲ ತಡವಾಗಿ ಬಂದದ್ದರಿಂದ ಇದ್ದ ಬೆಳೆಯನ್ನೂ ಕೂಡ ಇವರು ಕಳೆದುಕೊಂಡಿದ್ದಾರೆ. ಒಂದು ಎಕರೆಗೆ 200 ರೂ.ಗಳನ್ನು ಕೊಡುವುದನ್ನು ಅಗತ್ಯವಾಗಿ ಪುನರ್ವಿಮರ್ಶೆ ಮಾಡಬೇಕು. ಇದು ಮಾತ್ರವಲ್ಲ, ಈ 19 ಗ್ರಾಮಗಳನ್ನು ಮಾಪನ ಮಾಡಿದಾಗ ಇಷ್ಟು ಕಡಿಮೆ ಭಾಗದಲ್ಲಿ ಮಾತ್ರ ಹಾನಿಯಾಗಿದೆ ಎಂದಿರುವುದು ಸತ್ಯಕ್ಕೆ ದೂರವಾಗಿದೆ. ಆದುದರಿಂದ ಇದನ್ನು ಪುನರ್ವಿಮರ್ಶೆ ಮಾಡಬೇಕು, ಇದು ಒಂದು ಭಾಗ, ಇದಕ್ಕೆ ಸಮಾಧಾನ ಹೇಳಬೇಕು. ಇದರ ಜೊತೆಗೆ ಅಲ್ಲಿ 5 ಪ್ರಾಣ ಹಾನಿಯಾಗಿದೆ, ಇದಕ್ಕೆ ಪರಿಹಾರ ಕೊಟ್ಟಿರುವ ಬಗ್ಗೆ ಕೇಳಿರುವ ಪ್ರಶ್ನೆಗೆ ಒಂದು ಕೇಸ್‌ನಲ್ಲಿ ಅನುಕಂಪದ ಭತ್ಯೆ ಕೊಡುವ ವಿಷಯದಲ್ಲಿ ಮಂಜೂರಾಗುವ ಹಂತದಲ್ಲಿದೆ; ಉಳಿದ ಪ್ರಕರಣಗಳಲ್ಲಿ ಮೃತರ ವಾರಸುದಾರರು ಅಗತ್ಯ ದಾಖಲೆಗಳನ್ನು ಒದಗಿಸಿಲ್ಲವಾದ್ದರಿಂದ ಇನ್ನೂ ಪರಿಹಾರಧನ ಪಾವತಿ ಆಗಬೇಕಾಗಿದೆ ಎಂದಿದ್ದಾರೆ. ಇದನ್ನು ಓದಿದರೆ ನನಗೆ ದಾಸರ ಪದ ಈಗ ನೆನಪಾಗುತ್ತಿದೆ. ಒಂದು ಮನೆಯಲ್ಲಿ ಎರಡು ಆಕಳು ಇತ್ತು, ಅದರಲ್ಲಿ ಒಂದು ಗೊಡ್ಡು ಮತ್ತೊಂದು ಕರುವನ್ನು ಹಾಕಲೇ ಇಲ್ಲ. ಇದು ಕೂಡ ಹಾಗೆಯೇ ಇದೆ. ಏಕೆಂದರೆ ಒಂದರಲ್ಲಿ ಅನುಕಂಪ ಭತ್ಯೆ ಮಂಜೂರಾಗುವ ಹಂತದಲ್ಲಿದೆ, ಉಳಿದವರು ದಾಖಲೆ ಒದಗಿಸಿಲ್ಲ, ಆದ್ದರಿಂದ ಅವರಿಗೂ ಭತ್ಯೆ ಕೊಡಲಿಲ್ಲ. 5 ಪ್ರಾಣಹಾನಿಯಾಗಿದೆ. ಆ ಮನೆಗಳವರಿಗೆ ಸರ್ಕಾರದ ಅನುದಾನ ಏನು ಮುಟ್ಟಬೇಕಾಗಿತ್ತೋ ಅದು ಇನ್ನೂ ಮುಟ್ಟಸಲಿಲ್ಲವೆಂದರೆ ಒಂದು ರೀತಿಯ ನಿಷ್ಕರುಣೆ, ನಿಷ್ಕ್ರೀಯತೆ ಎನ್ನುವ ರೀತಿಯಲ್ಲಿ ಆಗುವುದಿಲ್ಲವೇ ಸನ್ಮಾನ್ಯ ಸಚಿವರು ಇದಕ್ಕೆ ಉತ್ತರಿಸಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಒಂದು ಪ್ರಕರಣದಲ್ಲಿ ಆ ಕುಟುಂಬದಲ್ಲಿ ಸತ್ತಿರುವ ವ್ಯಕ್ತಿಗೆ ಸಂಬಂಧಪಟ್ಟಂತೆ ಬೇಕಾಗಿರುವ ಎಲ್ಲಾ ದಾಖಲಾತಿಗಳನ್ನು ಕುಟುಂಬದವರು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದಾರೆ, ಅನುಕಂಪ ಭತ್ಯೆ ಕೊಡುವ ಕೆಲಸವನ್ನು ತಕ್ಷಣ ಮಾಡುತ್ತೇನೆ. ಇನ್ನು ಉಳಿದಿರತಕ್ಕಂಥ ಪ್ರಕರಣದಲ್ಲಿರುವ ವ್ಯಕ್ತಿಗಳು ಆ ಜಿಲ್ಲೆಗೆ ಸಂಬಂಧಪಟ್ಟವರಲ್ಲ. ಅವರು ಬೇರೆ ಬೇರೆ ಜಿಲ್ಲೆಗಳವರಾದ್ದರಿಂದ ಮಂಗಳೂರಿನ ಜಿಲ್ಲಾಧಿಕಾರಿಗಳು ಬೇರೆ ಬೇರೆ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ದಾಖಲಾತಿಗಳನ್ನು ಒದಗಿಸುವುದಕ್ಕೆ ಪತ್ರವನ್ನು ಬರೆದಿದ್ದಾರೆ. ಆ ದಾಖಲಾತಿಗಳು ಮತ್ತು ವರದಿ ಬಂದತಕ್ಷಣ ನಾವು ಖಂಡಿತವಾಗಿ ವಾರಸುದಾರರಿಗೆ ಅನುಕಂಪ ಭತ್ಯೆಯನ್ನು ಕೊಡುವ ವ್ಯವಸ್ಥೆಯನ್ನು ಮಾಡಿಸುತ್ತೇವೆ. ಇನ್ನು ಅನುಕಂಪ ಭತ್ಯೆ ಕಡಿಮೆ ಕೊಡುತ್ತಿದ್ದೀರಿ ಎಂದಿದ್ದಾರೆ, ಇದರ ಬಗ್ಗೆ ನಾವು ರೀ-ಕನ್ಸಿಡರೇಷನ್ ಮಾಡಬೇಕೆಂದು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಸ್ವಲ್ಪ ಮಟ್ಟಿಗೆ ನೋಡೋಣ ಒಂದು ರೂ. ಹೆಚ್ಚು ಮಾಡುವುದಕ್ಕಾಗುತ್ತದೆಯೋ 2 ರೂ. ಹೆಚ್ಚು ಮಾಡುವುದಕ್ಕಾಗುತ್ತದೆಯೋ, ಕೇಂದ್ರ ಸರ್ಕಾರದ ಕಡೆ ಕೈ ಇಟ್ಟುಕೊಂಡು ಕುಳಿತರೆ ಅದೇನೂ ಕೆಲಸ ಆಗುವ ಹಾಗೆ ಕಾಣುತ್ತಿಲ್ಲ. ಅದಕ್ಕೋಸ್ಕರ ನಾನೂ ಕೂಡ ಇದರ ಬಗ್ಗೆ ಚಿಂತನೆ ಮಾಡುತ್ತಿದ್ದೇನೆ. ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಸ್ವಲ್ಪ ಮಟ್ಟಿಗೆ ಹೆಚ್ಚು ಮಾಡುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್ : ನನ್ನ ಇನ್ನೊಂದು ಪ್ರಶ್ನೆಗೆ ಉತ್ತರ ಕೊಡಲಿಲ್ಲ. 19 ಗ್ರಾಮಗಳಲ್ಲಿ ಕಡಿಮೆ ಭಾಗದಲ್ಲಿ ಮಾತ್ರ ಹಾನಿಯಾಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಪುನರ್‌ಮಾಪನ ಮಾಡುವುದಕ್ಕೆ ಗ್ರಾಮ ಸಹಾಯಕರಿಗೆ ಸಲಹೆ ಕೊಡುತ್ತೀರೋ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಅದರ ಬಗ್ಗೆ ಪರಿಶೀಲಿಸುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೇ, ಪ್ರಕೃತಿ ವಿಕೋಪದಿಂದಾಗಿ ದನ ಕಟ್ಟುವ ಶೆಡ್ ಬಿದ್ದ ಪಕ್ಷದಲ್ಲಿ ಅದಕ್ಕೆ ಪರಿಹಾರ ಕೊಡುತ್ತಿಲ್ಲ. ಅದೇ ರೀತಿ ಕೋಳಿಫಾರಂ ಬಿದ್ದರೆ ಅದಕ್ಕೂ ಪರಿಹಾರವಿಲ್ಲ. ಅವುಗಳಿಗೂ ಕೂಡ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಏಕೆಂದರೆ ಬಹಳ ಕಷ್ಟದಿಂದ ರೈತ ಶೆಡ್‌ನ್ನು ಕಟ್ಟುತ್ತಿದ್ದಾರೆ, ಅದು ಬಿದ್ದುಹೋದರೆ ಅದನ್ನು ಪುನಃ ಕಟ್ಟುವುದಕ್ಕೆ ಕಷ್ಟವಾಗುತ್ತದೆಯಾದ ಕಾರಣ ಇದನ್ನೂ ಕೂಡ ಪರಿಗಣಿಸಬೇಕಾಗುತ್ತದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಪ್ರಕೃತಿ ವಿಕೋಪದಿಂದ ಉಂಟಾದ ಹಾನಿಗೆ ನಾವು ಕೊಡುವ ಹಣ ನಿಜಕ್ಕೂ ಯಾವುದಕ್ಕೂ ಆಗುವುದಿಲ್ಲ. ಆದರೆ ನಾವು ಕೊಡುವ ಹಣ ಕೇವಲ ಪರಿಹಾರ. ಇದರಿಂದ ಆ ಮನೆತನದ್ದು ಒಂದು ಕೋಟಿ ರೂ.ಗಳು ಹಾನಿಯಾಗಿದೆ ಎಂದರೆ ಅದನ್ನು ಸರ್ಕಾರದ ಕಡೆಯಿಂದ ಕೊಡುವುದಕ್ಕೆ ಬರುವುದಿಲ್ಲ. ಆದರೆ ಏನು ಕೋಟಿ ರೂ. ಗಳು ಹಾನಿಯಾಗಿರುತ್ತದೆ ಅದಕ್ಕೆ ಇಮ್ಮಿಡಿಯೇಟ್ ರಿಲೀಫ್ ಸಲುವಾಗಿ ಮಾತ್ರ ಇದು ಇರುವುದು.

ಶಿರಾ ತಾಲ್ಲೂಕು ಚಿಕ್ಕನ ಹಳ್ಳಿಯ ಕೃಷಿ ಪಾಠಶಾಲೆ ಕುರಿತು

577 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕು ಚಿಕ್ಕನ ಹಳ್ಳಿಯ ಕೃಷಿ ಪಾಠಶಾಲೆಯಲ್ಲಿ ರೈತ ಮಕ್ಕಳಿಗೆ ನೀಡುತ್ತಿರುವ ತರಬೇತಿಯ ಅವಧಿಯೆಷ್ಟು?

ಆ) ರೈತ ಮಕ್ಕಳಿಗೆ ರೂ.15ನ್ನು ದಿನಭತ್ಯೆಯನ್ನಾಗಿ ನೀಡುತ್ತಿರುವುದು ನಿಜವೇ? ದಿನಭತ್ಯೆ ಕಡಿಮೆಯಾಗಿರುವುದರಿಂದ ಸದರಿ ಪಾಠಶಾಲೆಯಲ್ಲಿ ಹಾಜರಾತಿ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಈ ಪಾಠಶಾಲೆಯಲ್ಲಿ ತರಬೇತಿ ಅವಧಿ ಹಾಗೂ ದಿನಭತ್ಯೆ ಹೆಚ್ಚಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಶಿರಾ ತಾಲ್ಲೂಕು ಚಿಕ್ಕನಹಳ್ಳಿ ಕೃಷಿ ಪಾಠಶಾಲೆಯಲ್ಲಿ ರೈತ ಮಕ್ಕಳಿಗೆ 3 ತಿಂಗಳ ಅಲ್ಪಾವಧಿಯ ತರಬೇತಿಯನ್ನು ವರ್ಷದಲ್ಲಿ 3 ತಂಡಗಳಲ್ಲಿ ನೀಡಲಾಗುತ್ತಿದೆ.

ಆ) ಹೌದು. ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ದಿನಭತ್ಯೆಯನ್ನು ರೂ. 15.00 ರಿಂದ ರೂ. 25.00 ಕ್ಕೆ ಹೆಚ್ಚಿಸಿ ಸರ್ಕಾರಿ ಆದೇಶ ಸಂಖ್ಯೆ. ಕೃತೋಇ 18 ಕೆಯೋಕಾ 96, ದಿನಾಂಕ: 23-07-1997 ನ್ನು ಹೊರಡಿಸಲಾಗಿದೆ.

ಇ) ತರಬೇತಿ ಅವಧಿಯನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. ಮೇಲೆ ಹೇಳಿದಂತೆ ದಿನಭತ್ಯೆಯನ್ನು ಈಗಾಗಲೇ ಹೆಚ್ಚಿಸಲಾಗಿದೆ.